# ಭತ್ತದ ತೆನೆಯ ಮನೆ

ಮೂಡುಬಿದಿರೆಯ ವಿದ್ಯಾಗಿರಿಯಲ್ಲಿ ನಡೆದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಪ್ರಾಯೋಜಿತ ಕೃಷಿಮೇಳದ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೃಷಿಕರು ರೂಪಿಸಿದ ಭತ್ತದ ತೆನೆಗಳ ಸುಂದರ ಮನೆ. ಜನಪದ ಸಂಸ್ಕೃತಿಯನ್ನು ಬಿಂಬಿಸುವ ಇದು ಸಾವಿರಾರು ಜನರ ಮನಸೂರೆಗೊಂಡಿತು.

**-ರತ್ನಾಕರ ಹೆಗಡೆಕಟ್ಟೆ, ಮೂಡುಬಿದಿರೆ**





# ಸೃಷ್ಟಿಯ ಚಮತ್ಕಾರ

ನಮ್ಮ ಮನೆಯ ಅಂಗಳದಲ್ಲಿ ಬಹು ಎಸಳಿನ ಕೇಸರಿ ದಾಸವಾಳ ಗಿಡದಲ್ಲಿ ಐದು ಎಸಳಿನ ಕೆಂಪು ದಾಸವಾಳ ಹೂವು ಅರಳಿ ಸೃಷ್ಟಿಯ ಚಮತ್ಕಾರ ಎತ್ತಿ ತೋರಿಸಿದೆ.

**-ಎಂ.ಕೆ. ಮಹಾಲೆ, ಅಂಕೋಲ**

# ನಂದಾದೀಪಗಳ ಸಂಗ್ರಹ

ಬಂಟ್ವಾಳದಲ್ಲಿ 'ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರ' ಹಾಗೂ 'ತುಳು ಬದುಕು ವಸ್ತು ಸಂಗ್ರಹಾಲಯ' ಎಂಬ ಅವಳಿ ಸಂಸ್ಥೆಗಳನ್ನು 10 ವರ್ಷಗಳ ಹಿಂದೆ ಹುಟ್ಟು ಹಾಕಿದವರು ಉಪನ್ಯಾಸಕ ತುಕಾರಾಂ ಪೂಜಾರಿ. ವಸ್ತುಗಳ ಸಂಗ್ರಹ ಗತ ಬದುಕಿನ ಇತಿಹಾಸದತ್ತ ಬೆಳಕು ಚೆಲ್ಲುತ್ತವೆ. ತುಳುನಾಡಿನ ರಕ್ಷಣೆಗಾಗಿ ಹೋರಾಡಿದ ರಾಣಿ ಅಬ್ಬಕ್ಕನ ಸ್ಮರಣೆಗಾಗಿ ಮತ್ತು ತುಳುವರ ಬದುಕನ್ನು ಜನಾಂಗಕ್ಕೆ ಪರಿಚಯಿಸುವುದಕ್ಕಾಗಿ ನಡೆಯುತ್ತಿರುವ ಪ್ರಯತ್ನವಿದು.

ಈ ಸಂಗ್ರಹಾಲಯದಲ್ಲಿ ವಿವಿಧ ಆಕಾರದ ದೀಪ ಬೆಳಗಿಸುವ ಪಣತೆಗಳು, ಲಾಟೀನುಗಳಿವೆ. ಪುರಾತನ ಕಾಲದಿಂದ ಬಳಕೆಯಲ್ಲಿದ್ದ ದೀಪಗಳನ್ನು ಬೇರೆ ಬೇರೆ ಪ್ರದೇಶಗಳಿಂದ ಸಂಗ್ರಹಿಸಿರುವುದು ಸ್ವಾಗತಾರ್ಹ. ತುಳುನಾಡಿನಲ್ಲಿ ಬಳಕೆಯಲ್ಲಿದ್ದ ಈ ವಸ್ತುಗಳನ್ನು ಅಚ್ಚುಕಟ್ಟಾಗಿ ಜೋಡಿಸಿಡಲಾಗಿದೆ.

**-ಪ್ರಕಾಶ ಎಸ್. ಮನ್ನಂಗಿ, ಹಾವೇರಿ**

